# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:–** ಶ್ರೀ ಕೆ.ಬಿ.ಚನ್ನಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಿರೇಕೆರೂರು, ಹಾಗೂ ಮತ್ತಿತರರ ವಿರುದ್ಧದ ಇಲಾಖಾ ವಿಚಾರಣೆಯ– ಅಂತಿಮ ದಂಡನಾದೇಶ.

**ಓದಲಾಗಿದೆ:–**

1. ಸಮ ಸಂಖ್ಯೆಯ ಕಾರಣ ಕೇಳುವ ದಿನಾಂಕ: 13.08.2012
2. ಶ್ರೀ ಹೆಚ್.ಹನಮಂತಪ್ಪ, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 17.08.2012
3. ಶ್ರೀ ಮನೋಹರ್ ಹಾದಿಮನಿ, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 07.09.2012
4. ಶ್ರೀ ವ್ಹಿ.ಎಸ್.ಪವಾರ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನೀಯರ್(ಪ್ರಭಾರ) ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 07.09.2012
5. ಶ್ರೀ ನಾಗರಾಜ್, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 07.09.2012
6. ಶ್ರೀ ಬಿ.ಬಸವಣ್ಣೆಪ್ಪ, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 07.09.2012
7. ಶ್ರೀ ವಿ.ಕೆ.ಟಿಕಾರಿ, ಹಿಂದಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 07.09.2012
8. ಶ್ರೀ ಕೆ.ಬಿ.ಚನ್ನಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಿರೇಕೆರೂರು, ಇವರ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 17.08.2012
9. ಸರ್ಕಾರದ ಸಮ ಸಂಖ್ಯೆಯ ಆದೇಶ ದಿನಾಂಕ:04.07.2013
10. ಸರ್ಕಾರದ ಸಮ ಸಂಖ್ಯೆಯ ಆದೇಶ ದಿನಾಂಕ:23.11.2013
11. ವಿಚಾರಣಾಧಿಕಾರಿಯು ಸಲ್ಲಿಸಿರುವ ವಿಚಾರಣಾ ವರದಿ ದಿನಾಂಕ: 02.04.2014
12. ಹಾವೇರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರ ಪತ್ರ ಸಂಖ್ಯೆ: ಹಾಜಿಪಂ/ಆಡಳಿತ–2/ಇವಿ/ವಹಿ–87/2015–16/2720, ದಿನಾಂಕ: 31.08.2015
13. ಸಮ ಸಂಖ್ಯೆಯ 2ನೇ ಕಾರಣ ಕೇಳುವ ನೋಟಿಸು ದಿನಾಂಕ: 07.01.2016
14. ಶ್ರೀ ಹೆಚ್.ಹನಮಂತಪ್ಪ, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರು 2ನೇ ಕಾರಣ ಕೇಳುವ ನೋಟಿಸಿಗೆ ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 06.04.2016
15. ಶ್ರೀ ಮನೋಹರ್ ಹಾದಿಮನಿ, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರು 2ನೇ ಕಾರಣ

ಕೇಳುವ ನೋಟಿಸಿಗೆ ಸಲ್ಲಿಸಿರುವ ದಿನಾಂಕ: 22.02.2016

16. ಶ್ರೀ ಪ್ಪಿ.ಎಸ್.ಪವಾರ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನೀಯರ್ (ಪ್ರಭಾರ) ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರು 2ನೇ ಕಾರಣ ಕೇಳುವ ನೋಟಿಸಿಗೆ ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 22.02.2016
17. ಶ್ರೀ ನಾಗರಾಜ್, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರು 2ನೇ ಕಾರಣ ಕೇಳುವ ನೋಟಿಸಿಗೆ ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 20.02.2016
18. ಶ್ರೀ ಬಿ.ಬಸವಣ್ಣೆಪ್ಪ, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರು 2ನೇ ಕಾರಣ ಕೇಳುವ ನೋಟಿಸಿಗೆ ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 13.02.2016
19. ಶ್ರೀ ವಿ.ಕೆ.ಟಿಕಾರಿ, ಹಿಂದಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು ಇವರು 2ನೇ ಕಾರಣ ಕೇಳುವ ನೋಟಿಸಿಗೆ ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ: 20.02.2016.

****

**ಪ್ರಸ್ತಾವನೆ:**

ಹಾವೇರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಹಿರೇಕೆರೂರು ತಾಲ್ಲೂಕು ಪಂಚಾಯತ್‌ನ 2007–08 ಮತ್ತು 2008–09ನೇ ಸಾಲುಗಳಲ್ಲಿ 12ನೇ ಹಣಕಾಸಿನ ಯೋಜನೆಯಲ್ಲಿ ಕೈಗೊಳ್ಳಲಾಗಿದ್ದ ಹಲವಾರು ಕಾಮಗಾರಿಗಳಲ್ಲಿನ ಹಣಕಾಸು ಅವ್ಯವಹಾರ ಸಂಬಂಧ ಈ ಕೆಳಕಂಡ 7 ಅಧಿಕಾರಿ/ನೌಕರರುಗಳಿಗೆ ಮೇಲೆ (1) ರಲ್ಲಿ ಓದಲಾದ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಜಾರಿ ಮಾಡಲಾಗಿದ್ದ ಕಾರಣ ಕೇಳುವ ನೋಟಿಸಿನೊಂದಿಗೆ ದೋಷಾರೋಪಣ ಪಟ್ಟಿಗೆ ಮೇಲೆ ಓದಲಾದ (2–8) ರಲ್ಲಿ ಅಧಿಕಾರಿಗಳು ನೀಡಿದ್ದ ಲಿಖಿತ ರಕ್ಷಣಾ ಹೇಳಿಕೆಗಳು ಅವರ ವಿರುದ್ದದ ಆರೋಪಗಳನ್ನು ಕೈಬಿಡಲು ಸಮಂಜಸ/ತೃಪ್ತಿಕರವಾಗಿಲ್ಲದೆ ಇದ್ದುದರಿಂದ, ಅವರುಗಳ ವಿರುದ್ದದ ಆರೋಪಗಳ ಸತ್ಯಾಸತ್ಯತೆಯನ್ನು ತಿಳಿಯಲು ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಫ.ಸಿ.ಗುಡ್ಡಾಕಾರ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಸಹಾಯಕ ಕಾರ್ಯದರ್ಶಿ ಜಿಲ್ಲಾ ಪಂಚಾಯತ್ ಹಾವೇರಿ, ಇವರನ್ನು ಮಂಡನಾಧಿಕಾರಿಯನ್ನಾಗಿ ಮೇಲೆ ಓದಲಾದ (9–10) ಗಳ ಸರ್ಕಾರಿ ಆದೇಶದಲ್ಲಿ ನೇಮಿಸಲಾಗಿರುತ್ತದೆ.

| ಕ್ರಮ ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ |
|---|---|
| 1. | ಶ್ರೀ ಕೆ.ಬಿ.ಚನ್ನಪ್ಪ,<br>ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ<br>ತಾಲ್ಲೂಕು ಪಂಚಾಯತ್ ಹಿರೇಕೆರೂರು. |
| 2. | ಶ್ರೀ ವಿ.ಕೆ.ಟಿಕಾರಿ,<br>ಹಿಂದಿನ ಸಹಾಯಕ ಕಾರ್ಯನಿರ್ವಾಹಕ<br>ಇಂಜಿನೀಯರ್, ಪಂಚಾಯತ್ ರಾಜ್<br>ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು |
| 3. | ಶ್ರೀ ವ್ಹಿ.ಎಸ್.ಪವಾರ,<br>ಹಿಂದಿನ ಸಹಾಯಕ ಕಾರ್ಯಪಾಲಕ<br>ಇಂಜಿನೀಯರ್ (ಪ್ರಭಾರ) ಪಂಚಾಯತ್<br>ರಾಜ್ ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು |
| 4. | ಶ್ರೀ ಬಿ.ಬಸವಣ್ಣೆಪ್ಪ,<br>ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್<br>ರಾಜ್ ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು |
| 5. | ಶ್ರೀ ನಾಗರಾಜ್,<br>ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್<br>ರಾಜ್ ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು |
| 6. | ಶ್ರೀ ಮನೋಹರ್ ಹಾದಿಮನಿ,<br>ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್<br>ರಾಜ್ ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು |
| 7. | ಶ್ರೀ ಹೆಚ್.ಹನಮಂತಪ್ಪ,<br>ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್<br>ರಾಜ್ ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು |

ದಿನಾಂಕ: 23.11.2013ರ ಸರ್ಕಾರಿ ಆದೇಶದಲ್ಲಿ ವಿಚಾರಣಾಧಿಕಾರಿಯಾಗಿ ನೇಮಕಗೊಂಡಿದ್ದ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಫ.ಸಿ.ಗುಡ್ಡಾಕಾರ, ಮೇಲೆ ಓದಲಾದ (॥) ರನ್ವಯ ನೀಡಿದ ವಿಚಾರಣಾ ವರದಿಯಲ್ಲಿ ಆರೋಪಿತ ಅಧಿಕಾರಿಗಳ ವಿರುದ್ಧದ ಆರೋಪಗಳನ್ನು ಮಂಡನಾಧಿಕಾರಿರವರು ನಿಸ್ಸಂದೇಹವಾಗಿ ರುಜುವಾತು/ಸಾಭೀತುಪಡಿಸಿರುವುದಿಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ/ವರದಿಸಿರುತ್ತಾರೆ. ವಿಚಾರಣಾಧಿಕಾರಿರವರ ವಿಚಾರಣಾ ವರದಿಯ ಬಗ್ಗೆ ಅಭಿಪ್ರಾಯವನ್ನು ನೀಡುವಂತೆ, ಹಾವೇರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರನ್ನು

ಕೋರಲಾಗಿ, ಮೇಲೆ ಓದಲಾ (12) ರಲ್ಲಿ ನೀಡಿದ್ದ ಅಭಿಪ್ರಾಯದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಈ ಕೆಳಕಂಡಂತೆ, ವರದಿಸಿರುತ್ತಾರೆ.

"ಹಿರೇಕೆರೂರು ತಾಲ್ಲೂಕು ಪಂಚಾಯತ್‌ನಿಂದ 12ನೇ ಹಣಕಾಸು ಯೋಜನೆಯಡಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳಲ್ಲಿ ತುಂಡು ಗುತ್ತಿಗೆಯ ಮೇಲೆ ನಿರ್ವಹಿಸಿದ್ದು, ಟೆಂಡರ್ ಪ್ರಕ್ರಿಯೆ ಕೈಗೊಳ್ಳದಿರುವುದು ಹಾಗೂ ಕಾಮಗಾರಿಗಳ ಬದಲಾವಣೆಗೆ ಸಕ್ರಮ ಪ್ರಾಧಿಕಾರದ ಅನುಮತಿ ಪಡೆಯದಿರುವುದು ಹಾಗೂ 2 ವರ್ಷದ ಕ್ರಿಯಾಯೋಜನೆ ಮೊತ್ತ ಸೇರಿಸಿ ಅಂದಾಜು ಪತ್ರಿಕೆ ತಯಾರಿಸಿ ತಾಂತ್ರಿಕ ಮಂಜೂರಾತಿ ಪಡೆದು ಅನುಷ್ಠಾನಗೊಳಿಸಿರುವುದು ತಿಳಿದು ಬರುತ್ತದೆ."

ವಿಚಾರಣಾಧಿಕಾರಿಯು ನೀಡಿರುವ ವಿಚಾರಣಾ ವರದಿ ಹಾಗೂ ಹಾವೇರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ನೀಡಿದ್ದ ವರದಿ/ಅಭಿಪ್ರಾಯವನ್ನು ಪರಿಶೀಲಿಸಿ, ಹಿರೇಕೆರೂರು ತಾಲ್ಲೂಕು ಪಂಚಾಯತ್ ವತಿಯಿಂದ 2007-08 ಮತ್ತು 2008-09ನೇ ಸಾಲುಗಳ 12ನೇ ಹಣಕಾಸು ಯೋಜನೆಯಡಿ ಕೈಗೊಳ್ಳಲಾದ ಹಲವಾರು ಕಾಮಗಾರಿಗಳನ್ನು ಮಂಜೂರಾದ ಸ್ಥಳಗಳಲ್ಲಿ ನಿರ್ವಹಿಸದೇ, ತಾಲ್ಲೂಕು ಪಂಚಾಯತ್‌ನ ಸದಸ್ಯರು ಅಧ್ಯಕ್ಷರು ಹಾಗೂ ಇತರರ ಶಿಫಾರಸ್ಸುಗಳ ಮೇರೆಗೆ ಸ್ಥಳ ಬದಲಾವಣೆ ಮಾಡಿಕೊಂಡು ನಿರ್ವಹಿಸಿರುವುದು ಹಾಗೂ ಇದಕ್ಕೆ ಘಟನೋತ್ತರ ಅನುಮೋದನೆಯನ್ನಾಗಲಿ ಪಡೆಯದೇ ಇರುವುದು ಹಾಗೂ ಕ್ರಿಯಾ ಯೋಜನೆಗಳನ್ನು 1.00 ಲಕ್ಷಗಳೊಳಗೆ ತಯಾರಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ 1999 ರ ಉಲ್ಲಂಘಿಸಿರುವುದು ಕಂಡು ಬಂದಿದ್ದರ ಮೇರೆಗೆ, ಹಾಗೂ ಹಿರೇಕೆರೂರು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೆ.ಬಿ.ಚನ್ನಪ್ಪ, ಇವರು ಸದರಿ ಹುದ್ದೆಯಲ್ಲಿ, ದಿನಾಂಕ: 24.12.2007 ರಂದು ಕಾರ್ಯವರದಿ ಮಾಡಿಕೊಂಡಿದ್ದು, ಸದರಿಯವರು ಕಾರ್ಯವರದಿ ಮಾಡಿಕೊಳ್ಳುವ ಪೂರ್ವದಲ್ಲಿಯೇ ದಿನಾಂಕ:20.12.2007 ರಂದು ಅಂದಾಜು ಪತ್ರಿಕೆಗಳಿಗೆ ಅನುಮೋದನೆ ನೀಡಿರುವುದರಿಂದ, ಇವರನ್ನು ಹೊರತುಪಡಿಸಿ, ಇನ್ನುಳಿದ 6 ಅಧಿಕಾರಿ/ನೌಕರರುಗಳಿಗೆ ಮೇಲೆ (13)ಓದಲಾದಂತೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11(ಎ) ರನ್ವಯ 2ನೇ ಕಾರಣ ಕೇಳುವ ನೋಟಿಸನ್ನು ಮಾಡಲಾಗಿತ್ತು. ಇದಕ್ಕೆ ಮೇಲೆ ಓದಲಾದ (14-19) ಗಳಲ್ಲಿ ಆರೋಪಿತ ಅಧಿಕಾರಿಗಳು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳಲ್ಲಿ, ವಿಚಾರಣಾಧಿಕಾರಿಯು ನೀಡಿರುವ ವರದಿಯನ್ನು ಅಂಗೀಕರಿಸಿ, ತಮ್ಮ ವಿರುದ್ಧದ ಆರೋಪಗಳನ್ನು ಕೈಬಿಟ್ಟು ದೋಷಮುಕ್ತಗೊಳಿಸುವಂತೆ, ಕೋರಿರುತ್ತಾರೆ.

ಆರೋಪಿತ ಅಧಿಕಾರಿಗಳು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳನ್ನು ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಹಿರೇಕೆರೂರು ತಾಲ್ಲೂಕು ಪಂಚಾಯತ್ ವತಿಯಿಂದ 2007-08 ಮತ್ತು 2008-09ನೇ ಸಾಲುಗಳ 12ನೇ ಹಣಕಾಸು ಯೋಜನೆಯಡಿ ಕೈಗೊಳ್ಳಲಾದ ಹಲವಾರು ಕಾಮಗಾರಿಗಳನ್ನು ಮಂಜೂರಾದ ಸ್ಥಳಗಳಲ್ಲಿ ನಿರ್ವಹಿಸದೇ ಇರುವುದು, ಹಾಗೂ ಕ್ರಿಯಾ ಯೋಜನೆಗಳನ್ನು 1.00 ಲಕ್ಷಗಳೊಳಗೆ ತಯಾರಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ 1999 ರ ಉಲ್ಲಂಘಿಸಿರುವುದು ಸ್ಪಷ್ಟವಾಗಿರುವುದರಿಂದ, ಹಾಗೂ ಆರೋಪಿತ ಅಧಿಕಾರಿಗಳ ವಿರುದ್ಧದ ಆರೋಪಗಳನ್ನು ಕೈಬಿಡಲು ಅಧಿಕಾರಿಗಳು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಗಳು ಸಕಾರಣ/ತೃಪ್ತಿಕರವಾಗಿಲ್ಲದೆ ಇರುವುದರಿಂದ, ಅವರ ವಿರುದ್ಧದ ಆರೋಪಗಳಿಗನುಗುಣವಾಗಿ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 52 ವಿಸೇಬಿ 2010 ಬೆಂಗಳೂರು ದಿನಾಂಕ: 04-10-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಹಾವೇರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಹಿರೇಕೆರೂರು ತಾಲ್ಲೂಕು ಪಂಚಾಯತ್‌ನ 2007-08 ಮತ್ತು 2008-09ನೇ ಸಾಲುಗಳಲ್ಲಿ 12ನೇ ಹಣಕಾಸಿನ ಯೋಜನೆಯಲ್ಲಿ ಕೈಗೊಳ್ಳಲಾಗಿದ್ದ ಹಲವಾರು ಕಾಮಗಾರಿಗಳಲ್ಲಿನ ಹಣಕಾಸು ಅವ್ಯವಹಾರ ಹಾಗೂ ನಿಯಮಗಳ ಉಲ್ಲಂಘನೆಯಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿ/ನೌಕರರುಗಳಿಗೆ ಅವರುಗಳು ಎಸಗಿರುವ ದುರ್ನಡತೆ/ಕರ್ತವ್ಯಲೋಪಕ್ಕೆ ಅನುಗುಣವಾಗಿ ಅಧಿಕಾರಿಗಳ ಹೆಸರಿನ ಎದುರು ನಮೂದಿಸಿರುವ ದಂಡನೆಯನ್ನು ಸರ್ಕಾರವು ವಿಧಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ವಿಧಿಸಿರುವ ದಂಡನೆ |
|---|---|---|
| 1. | ಶ್ರೀ ವಿ.ಕೆ.ಟಿಕಾರಿ,<br>ಹಿಂದಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್,<br>ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು | ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 8(iii) ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಖಾಯಂ ಆಗಿ ತಡೆಹಿಡಿಯಲಾಗಿದೆ. |

| | | |
|---|---|---|
| 2. | ಶ್ರೀ ವ್ಹಿ.ಎಸ್.ಪವಾರ,<br>ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನೀಯರ್ (ಪ್ರಭಾರ)<br>ಪಂಚಾಯತ್ ರಾಜ್<br>ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು | 1) ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 8(iii) ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಖಾಯಂ ಆಗಿ ತಡೆಹಿಡಿಯಲಾಗಿದೆ.<br>2) ಅಧಿಕಾರಿಯಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.90,000-ಗಳಿಗೆ ಇವರು ಸಹ ಕಾರಣಕರ್ತರಾಗಿರುವುದರಿಂದ, ಇವರಿಂದ ರೂ. 45,000/-ಗಳನ್ನು ವಸೂಲು ಮಾಡುವುದು. |
| 3. | ಶ್ರೀ ಬಿ.ಬಸವಣ್ಣೆಪ್ಪ,<br>ಹಿಂದಿನ ಕಿರಿಯ ಇಂಜಿನೀಯರ್,<br>ಪಂಚಾಯತ್ ರಾಜ್<br>ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು | 1) ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 8(iii) ರನ್ವಯ ಎರಡು ವಾರ್ಷಿಕ ವೇತನ ಬಡ್ತಿಯನ್ನು ಖಾಯಂ ಆಗಿ ತಡೆಹಿಡಿಯಲಾಗಿದೆ.<br>2) ಅಧಿಕಾರಿಯಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.90,000-ಗಳಿಗೆ ಇವರು ಸಹ ಕಾರಣಕರ್ತರಾಗಿರುವುದರಿಂದ, ಇವರಿಂದ ರೂ. 45,000/-ಗಳನ್ನು ವಸೂಲು ಮಾಡುವುದು. |
| 4. | ಶ್ರೀ ನಾಗರಾಜ್,<br>ಹಿಂದಿನ ಕಿರಿಯ ಇಂಜಿನೀಯರ್,<br>ಪಂಚಾಯತ್ ರಾಜ್<br>ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು | ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 8(iii) ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷದ ಮಟ್ಟಿಗೆ ತಡೆಹಿಡಿಯಲಾಗಿದೆ. |
| 5. | ಶ್ರೀ ಮನೋಹರ್ ಹಾದಿಮನಿ,<br>ಹಿಂದಿನ ಕಿರಿಯ ಇಂಜಿನೀಯರ್,<br>ಪಂಚಾಯತ್ ರಾಜ್<br>ಇಂಜಿನೀಯರಿಂಗ್ ಉಪವಿಭಾಗ,<br>ಹಿರೇಕೆರೂರು | ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 8(iii) ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷದ ಮಟ್ಟಿಗೆ ತಡೆಹಿಡಿಯಲಾಗಿದೆ. |

| | | |
|---|---|---|
| 6. | ಶ್ರೀ ಹೆಚ್.ಹನಮಂತಪ್ಪ, ಹಿಂದಿನ ಕಿರಿಯ ಇಂಜಿನೀಯರ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ಉಪವಿಭಾಗ, ಹಿರೇಕೆರೂರು | ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 8(iii) ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಖಾಯಂ ಆಗಿ ತಡೆಹಿಡಿಯಲಾಗಿದೆ. |

ಹಿರೇಕೆರೂರು ತಾಲ್ಲೂಕು ಪಂಚಾಯತ್‌ನಲ್ಲಿ ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೆ.ಬಿ.ಚನ್ನಪ್ಪ, (ಪ್ರಸ್ತುತ ನಿವೃತ್ತ) ಇವರನ್ನು, ದಿನಾಂಕ: 13.08.2012 ರಂದು ಜಾರಿ ಮಾಡಲಾಗಿದ್ದ, ಕಾರಣ ಕೇಳುವ ನೋಟಿಸಿನೊಂದಿಗೆ ಮಾಡಲಾಗಿದ್ದ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

6/10/2016

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ &ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಮಹಾಲೇಖಪಾಲರು(ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ) ರವರ ಕಾರ್ಯದರ್ಶಿ, ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-01
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಸಂಬಂಧಿಸಿದ ಅಧಿಕಾರಿಗಳಿಗೆ.
5) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅಪಂ.ರಾಜ್ ಇಲಾಖೆ
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.